# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.251-2020** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೃಷ್ಣ<br>ಕಳಲೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 11-07-2024.** |

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ.ವೈ ವಕೀಲರಿಂದಃ**

3. ಭೋಗ್ಯಪತ್ರದಲ್ಲಿ 3 ವರ್ಷದ ವಾಯಿದೆಯನ್ನು ತೋರಿಸಲಾಗಿರುತ್ತದೆ. ನನ್ನ ತಂದೆಯವರು 2011 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ಮರಣ ಹೊಂದುವವರೆವಿಗೆ ಕುಟುಂಬದ ವ್ಯವಹಾರವನ್ನು ಮನೆಯ ಯಜಮಾನರಾಗಿ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರೇ ಕುಟುಂಬದ ಯಜಮಾನರಾಗಿದ್ದರಿಂದ ನಾನು ಕುಟುಂಬದ ವ್ಯವಹಾರದಲ್ಲಿ ಮಧ್ಯ ಪ್ರವೇಶ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯವರ ತಂದೆಯವರು ಅನ್ಯೋನ್ಯವಾಗಿದ್ದರು ಎಂದರೆ ಸರಿ. ಸದರಿ ಅನ್ಯೋನ್ಯತೆಯ ಮೇರೆಗೆ ನನ್ನ ತಂದೆಯವರ ಪ್ರತಿವಾದಿಯಿಂದ ಮತ್ತು ಅವರ ತಂದೆಯಿಂದ ಅವಶ್ಯಕತೆ ಬಿದ್ದಾಗ ಹಣವನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಕ್ರಯದ ಹಣಕ್ಕೆ ಉತಾರು ಮಾಡಿಕೊಳ್ಳುವಂತೆ ತಿಳಿಸಿ ಆ ರೀತಿ ಹಣವನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಸುಮಾರು ರೂ.19,000/-ಗಳನ್ನು ಪ್ರತಿವಾದಿ ಮತ್ತು ಅವರ ತಂದೆಯವರಿಂದ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗೆ ಮಾರಾಟ ಮಾಡುವ ಉದ್ದೇಶದಿಂದ ಮೌಖಿಕವಾಗಿ ಕರಾರು ಮಾಡಿಕೊಂಡು ಪ್ರತಿವಾದಿ ಮತ್ತು ಅವರ ತಂದೆಯಿಂದ ರೂ.19,000/- ಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣದಿಂದಾಗಿ ಭೋಗ್ಯದವಾಯಿದೆ ಮುಗಿದ ತಕ್ಷಣ ನನ್ನ ತಂದೆಯವರು

ಭೋಗ್ಯವನ್ನು ತೀರುವಳಿ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಭೋಗ್ಯದವಾಯಿದೆ 3 ವರ್ಷ ಅದು ಕಳೆದ ನಂತರ 30 ವರ್ಷಗಳಾದರು ಭೋಗ್ಯವನ್ನು ಮೇಲ್ಕಂಡ ಕಾರಣದಿಂದ ತೀರುವಳಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣದಿಂದ ನಾನು ಭೋಗ್ಯದ ಬಿಡುಗಡೆಯ ಹಕ್ಕನ್ನು ಕಳೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4. ನಾನೇ ಹೇಳಿದಂತೆ ಭೋಗ್ಯದ ಜಮೀನಿನ ಪೈಕಿ ಸುಮಾರು 1 ಎಕರೆ ಜಮೀನನ್ನು ಪ್ರತಿವಾದಿಗಳು ಖುಷ್ಕಿ ಜಮೀನಿನಿಂದ ತರೀ ಜಮೀನನ್ನಾಗಿ ಪರಿವರ್ತನೆ ಮಾಡಿದ್ದು ಇದರಿಂದ ಬೆಲೆ ಹೆಚ್ಚಾಗಿರುತ್ತದೆ ಎಂದರೆ ಸರಿ. ನೀರಾವರಿ ಆಗದೇ ಉಳಿದಿರುವ ಖುಷ್ಕಿ ಜಮೀನಿನ ಬೆಲೆಯೂ ಸಹ ಈಗ ಹೆಚ್ಚಾಗಿರುತ್ತದೆ ಎಂದರೆ ಸರಿ. ದಾವಾ ಜಮೀನಿನ ಖಾತೆ ನನ್ನ ತಾತ ರಾಜಶೆಟ್ಟರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ನನ್ನ ತಾತನವರ ಮರಣಾ ನಂತರ ಸುಮಾರು ವರ್ಷಗಳ ಕಾಲ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯನ್ನು ಬದಲಾವಣೆ ಮಾಡಿಸಿಕೊಂಡಿರಲಿಲ್ಲ, ಇತ್ತೀಚೆಗೆ ಖಾತೆಗೆ ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು 2012 ನೇ ಸಾಲಿನಲ್ಲಿ ನನ್ನ ತಂದೆಯವರ ಮರಣಹೊಂದಿದ ನಂತರ ನನ್ನ ತಾಯಿ, ಸಹೋದರ ಮತ್ತು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ. ನನ್ನ ತಂದೆಯವರು ಪ್ರತಿವಾದಿಯವರಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಕೊಡಲು ಒಪ್ಪಿದ್ದರಿಂದ ಸುಮಾರು ವರ್ಷಗಳ ಕಾಲ ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಪ್ರತಿವಾದಿಗೂ 2010 ರಲ್ಲಿ ವ್ಯಾಜ್ಯ ಶುರುವಾದ ನಂತರ ನಾವು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಪ್ರತಿವಾದಿಯವರು ಸಲ್ಲಿಸಿರುವ ಮೇಲ್ಮನವಿಯೂ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಎಂದರೆ ಸರಿ. ನಾನು ಕಾಲಮಿತಿ ಮೀರಿ ದಾವೆಯನ್ನು ಸಲ್ಲಿಸಿರುವುದಿಲ್ಲ, ಕಾಲವಿಳಂಬದ ಮೇರೆಗೆ ದಾವಾದಲ್ಲಿ

ಕೋರಿರುವ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾಸ್ತವಾಂಶಕ್ಕೆ ವಿರುದ್ಧವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**